ಎಂದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಈಗಂತೂ ಯಾವ ಕಾನೂನಿನಲ್ಲೂ ಶಾಸಕರಿಗೆ ಅಧಿಕಾರ ಇಲ್ಲ. ಆದರೆ ನಾವು ಅಧಿಕಾರವನ್ನು ಚಲಾಯಿಸಬೇಕೆನ್ನುತ್ತೇವೆ. ಈ ರೀತಿ back seat driving ನ್ನು ನಾವು ಬಿಡಬೇಕು. ಯಾರಿಗೆ ಜವಾಬ್ದಾರಿ ಇದೆ, ಅವರಿಗೆ ಅಧಿಕಾರವನ್ನು ಕೊಟ್ಟುಬಿಡೋಣ. ಇದು ನನ್ನ ಒತ್ತಾಯ ಸಾರ್.

**ಛೇರ್ಮನ್** : ಈಗ ಅನೇಕ ಮಾನ್ಯ ಸದಸ್ಯರುಗಳು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲಿಕ್ಕೆ ಪತ್ರಗಳನ್ನು ಕೊಟ್ಟಿದ್ದಾರೆ. ಈಗ ನಾಳೆ ಇನ್ನೂ ಕೂಡ ಬಹಳ ಪ್ರಮುಖವಾದ ಕಾರ್ಯಕಲಾಪಗಳನ್ನು ಸಭೆಯಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸಚಿವರು ಉತ್ತರ ಕೊಟ್ಟಮೇಲೆ ಅವರಿಗೆ ಕ್ಲಾರಿಫಿಕೇಷನನ್ನು ಕೇಳುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡಲಾಗುತ್ತದೆ. ಇವತ್ತಿಗೆ ಈ ಕುಡಿಯುವ ನೀರಿನ ಸಮಸ್ಯೆಯ ಚರ್ಚೆ ಮುಕ್ತಾಯಗೊಂಡಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು 6–03 ಗಂಟೆಗೆ ಮುಂದೂಡಲ್ಪಟ್ಟು ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

**ಅನುಬಂಧ – I**

395(204) : ಶ್ರೀ ಅಭಯ ಪಾಟೀಲ್ (ಬಾಗೇವಾಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಕೆಲವು ಜನ ಮರಳನ್ನು ಸಾಗಿಸುತ್ತಿದ್ದು, ಇದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಮರಳನ್ನು ಸಾಗಿಸುವುದರಿಂದ ರಸ್ತೆ ಸಂಚಾರ ವಿಪರೀತಗೊಂಡು ರಸ್ತೆಗಳು ಹದಗೆಟ್ಟಿದೆ; ಅವುಗಳ ದುರಸ್ತಿಗೆ ಸರ್ಕಾರದ ಕ್ರಮಗಳೇನು?

ಶ್ರೀ ಧರಂಸಿಂಗ್(ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿ ಪಾತ್ರದಲ್ಲಿ ಅಕ್ರಮ ಮರಳು ಗಣಿಗಾರಿಕೆ ತಡೆಗಟ್ಟಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

1) 2001–02ನೇ ಸಾಲಿನಿಂದ 2004–05ನೇ ಡಿಸೆಂಬರ್ ಅಂತ್ಯದವರೆಗೆ ಅಕ್ರಮ ಮರಳು ಸಾಗಾಣಿಕೆಯ 185 ಪ್ರಕರಣಗಳನ್ನು ಪತ್ತೆ ಹಚ್ಚಿ ರೂ. 5.98 ಲಕ್ಷ ದಂಡ ವಸೂಲಿ ಮಾಡಲಾಗಿದೆ.

2) 367 ಮರಳು ನಿಕ್ಷೇಪಗಳನ್ನು ಗುರ್ತಿಸಿ ಮರಳು ಹರಾಜು ಅಧಿಸೂಚನೆ ಹೊರಡಿಸಿದೆ,

3) ಮರಳು ಹರಾಜು ಅಧಿಸೂಚನೆ ಹೊರಡಿಸಲಾದ ಪೈಕಿ 224 ಮರಳು ನಿಕ್ಷೇಪಗಳ 711.25 ಎಕರೆ ಪ್ರದೇಶವನ್ನು ಮರಳು ಗಣಿಗಾರಿಕೆಗೆ ಹರಾಜು ಮಾಡಲಾಗಿದೆ. ಹಾಗು ಇದರಿಂದ ರೂ. 66.86 ಲಕ್ಷ ರಾಜಸ್ವ ಸಂಗ್ರಹಿಸಲಾಗಿದೆ.

ಇ) ಮರಳು ಹರಾಜಿನಿಂದ ಸಂಗ್ರಹಿಸಲಾದ ಶೇ 50ರಷ್ಟು ಮೊತ್ತವನ್ನು ಆಯಾ ಗ್ರಾಮ ಪಂಚಾಯ್ತಿಗಳಿಗೆ ನೀಡಲಾಗುತ್ತಿದ್ದು, ಸದರಿ ಹಣದಿಂದ ಮರಳು ಸಾಗಾಣಿಕೆಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಕ್ರಮ ವಹಿಸಬಹುದಾಗಿದೆ.